ಅವರು ಪರೀಕ್ಷೆಯನ್ನು ಸರಿಯಾಗಿ ಮಾಡುತ್ತಾರೆಯೇ ಅಥವಾ ಇಲ್ಲವೇ ಎನ್ನುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಒಬ್ಬ ಟೆಕ್ನಿಕಲ ಆಫೀಸರ್‌ನನ್ನು ನೇಮಕ ಮಾಡಿ ಆಗಿಂದಾಗ್ಗೆ ಸರ್‌ಪ್ರೈಸ್ ಚೆಕ್ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ ದೇವರಾಜ ಅರಸ್.— ಸರ್‌ಪ್ರೈಸ್ ಚೆಕ್ ಮಾಡುವ ವ್ಯವಸ್ಥೆಯನ್ನು ಇಟ್ಟಿದ್ದೇವೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಚೆಕ್ ಮಾಡುವುದು ಏನೂ ಇಲ್ಲ. ಅವನ್ನು ಎಕ್ಸ್‌ಸೈಜ್ ಡಿಪಾರ್ಟಮೆಂಟಿನಲ್ಲಿರತಕ್ಕವರೇ ನೋಡಬಹುದು. ಬೇರೆ ಟೆಕ್ನಿಕಲ್ ಒಪಿನಿಯನ್ ಏನು ಬೇಕಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ತಾಲ್ಲೂಕು ಮಟ್ಟದಲ್ಲಿ ಈ ಪರೀಕ್ಷೆಗಳು ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಕಂಟ್ರಾಕ್ಟದಾರರಿಂದ, ಎಕ್ಸೈಜ್ ಡಿಪಾರ್ಟಮೆಂಟಿನ ಸಿಬ್ಬಂದಿ ವರ್ಗಕ್ಕೂ ಒಂದು ವಿಧವಾದಂಥ ಲಂಚ ರುಷವತ್ತುಗಳು ಹೆಚ್ಚಾಗಿದೆ. ಇದಕ್ಕೆ ತಾವು ವಿಶೇಷ ರೀತಿಯ ಸಿಬ್ಬಂದಿಯನ್ನು ನೇಮಿಸಿ ಈ ಕಲಬೆರಕೆ ಮಾಡುವುದನ್ನು ಅದಷ್ಟು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.— ಅದಕ್ಕೆ ಒಂದು ವಿಶೇಷ ಸಿಬ್ಬಂದಿಯನ್ನು ಇಲಾಖೆಯಿಂದ ನೇಮಿಸಿದ್ದೇವೆ. ಪ್ರತ್ಯೇಕವಾದಂಥ ಪೋಲೀಸ್ ಅಧಿಕಾರಿ ಡಿ ಐ.ಜಿ. ಲೆವೆಲ್‌ನ ಆಫೀಸರ್ ಎಂದು ಕಾಣುತ್ತದೆ, ಇವರನ್ನು ಇದಕ್ಕೆ ನೇಮಕ ಮಾಡಿ, ಅವರ ಕೈಕೆಳಗೆ ಸಿಬ್ಬಂದಿ ಕೊಟ್ಟು ಒಂದು ಸ್ಕ್ವಾಡ್ ಕೂಡ ಮಾಡಿದ್ದೇವೆ.

9-30 A.M.

STATE GOVERNMENT EMPLOYEES

182. Sri KAGODU THIMMAPPA (Sagar).—

Will the Chief Minister be pleased to state :—

(a) the number of employees working in several Departments of the State Government ;

(b) out of them, the number of Brahmins, Lingayats Vokkaligas, Scheduled Castes and Scheduled Tribes, Mohmedans, Christians and the rest ?

Sri D. DEVARAJ URS (Chief Minister).—

(a) 2,76,270.

(b) Number of Scheduled Caste Employees 17,525

Number of Scheduled Tribes Employees–2,638.

Figures of other castes among Government Employees are not available as such particulars are not maintained.

ಶ್ರೀ ಕಾಗೋಡು ತಿಮ್ಮಪ್ಪ.—(ಬ) ಪ್ರಶ್ನೆಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಜಾತಿ ನೌಕರರ ಸಂಖ್ಯೆ ಮಾತ್ರ ಕೊಡಲಾಗಿದೆ. ಇತರ ಜಾತಿಗಳವರ ಸಂಖ್ಯೆ ಅಂದರೆ ಬ್ರಾಹ್ಮಣರು ಲಿಂಗಾಯತರು ಮುಂತಾದವುಗಳಲ್ಲಿರುವ ನೌಕರರ ಸಂಖ್ಯೆ ಕೊಟ್ಟಿಲ್ಲ. ಕಾರಣವೇನು?

†ಶ್ರೀ ಡಿ. ದೇವರಾಜ ಅರಸ್.—ಅದನ್ನು ಕೊಡಲು ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ—ಹಿಂದೆ ರಾಜ್ಯದಲ್ಲಿ ನಾಗನಗೌಡ ಸಮಿತಿ ಮಾಡಿದ್ದರು. ಆ ಸಮಿತಿಯು ಜಾತಿವಾರು ವಿವರ ಸಂಗ್ರಹಿಸಿದೆ. ಅದನ್ನು ನೋಡಿ ಅಲ್ಲಿಂದ ಮುಂದಿನ ವಿಷಯ ಸಂಗ್ರಹಿಸಿ ಉತ್ತರ ಏಕೆ ಕೊಡಬಾರದು?

ಶ್ರೀ ಡಿ. ದೇವರಾಜ ಅರಸ್.—ನನಗೆ ಜ್ಞಾಪಕವಿರುವಹಾಗೆ ೧೯೪೭ನೆಯ ಇಸವಿ ಸೆನ್ಸಸ್‌ಗೇ ಆ ರೀತಿ ವಿವರ ಸಂಗ್ರಹಿಸುವುದು ಆಖೈರಾಯಿತು ಜಾತಿವಾರು ವಿವರ ನಾಗನಗೌಡ ಸಮಿತಿ ಕೊಟ್ಟಿರಬಹುದು. ಆದರೆ ಅಧಿಕೃತವಾದ ರಿಕಾರ್ಡ ಆ ಬಗ್ಗೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲದಿದ್ದರೂ ಕೂಡ ಅದನ್ನು ಸಂಗ್ರಹ ಮಾಡ ಬಹುದು, ಇದೇನೂ ಮಹತ್ವದ ಕೆಲಸವಲ್ಲ. ಒಂದು ಸರ್ಕೂಲರ ಕಳಿಸಿದರೆ ಇಲಾಖೆ ಗಳವರು ವಿವರ ಸಂಗ್ರಹಿಸಿ ಕಳಿಸುವರು, ಇದರಿಂದ ಬಾಧಕವೇನೂ ಇಲ್ಲ. ಆದ ಕಾರಣ ಸಂಗ್ರಹ ಏಕೆ ಮಾಡಬಾರದು?

ಶ್ರೀ ಡಿ. ದೇವರಾಜ ಅರಸ್.—ಕೇಳಿದರೆ ಅವರು ಜಾತಿಯ ವಿವರ ಕೊಡ ದಿದ್ದರೆ ನಾವು ಅಧಿಕಾರಿಗಳನ್ನು ಒತ್ತಾಯಮಾಡುವುದಕ್ಕಾಗುವುದಿಲ್ಲ. ರಾಜ್ಯಾಂಗದ ಪ್ರಕಾರ ಒತ್ತಾಯ ಆ ಬಗ್ಗೆ ಮಾಡುವಂತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ರಾಜ್ಯಾಂಗದಲ್ಲಿ ಆ ವಿವರ ಕೊಡಬಾರದೆಂದಿಲ್ಲ.

ಶ್ರೀ ಡಿ ದೇವರಾಜ ಅರಸ್.—ಕೊಡಬೇಕು ಎಂದೂ ಇಲ್ಲ, ಕೊಡುವದಿಲ್ಲ ವೆಂದರೆ ಒತ್ತಾಯಪಡಿಸುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಾಗನಗೌಡ ಸಮಿತಿಯವರು ತಮ್ಮ ವರದಿ ಯಲ್ಲಿ ಯಾವ ಯಾವ ಜಾತಿಯವರಿಷ್ಟಿದ್ದಾರೆಂಬುದನ್ನು ೫೧ನೆಯ ಇಸವಿಯವರೆಗೆ ಸಂಗ್ರಹ ಮಾಡಿ ಕೊಟ್ಟಿದ್ದಾರೆ. ತದನಂತರ ಎಷ್ಟು ಜನರು ಸೇರಿದ್ದಾರೆ ಎಂದು ಸಂಗ್ರಹಿಸಲು ತೊಂದರೆಯೇನು?

ಶ್ರೀ ಡಿ. ದೇವರಾಜ ಅರಸ್.—ಅದಾಗಿ ಈಗಾಗಲೆ ಸುಮಾರು ೧೨ ವರ್ಷದ ಮೇಲಾಗಿದೆ ಮಾನ್ಯ ಸದಸ್ಯರು ಹೇಳಿದಂತೆ ಮಾಡಬೇಕಾದರೆ ಅದಕ್ಕೆ ಇನ್ನೊಂದು ಸಮಿತಿ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಏಕೆ?

ಶ್ರೀ ಡಿ. ದೇವರಾಜ ಅರಸ್.—ಇಲ್ಲದಿದ್ದರೆ ಆ ಕೆಲಸ ಮಾಡಲು ಸಾಧ್ಯವಿಲ್ಲ. ಮಾನ್ಯ ಸದಸ್ಯರು ಸ್ವಲ್ಪ ಅಥ್ಯಮಾಡಿಕೊಳ್ಳಬೇಕು ಹೇಳುವುದನ್ನು. ಕಾನೂನು ರೀತ್ಯ ಯಾರನ್ನೂ ಜಾತಿ ಯಾವುದು ಎಂದು ಕೇಳಲು ಅಧಿಕಾರವಿಲ್ಲ. ಆದನ್ನು ಹೇಳದಿರುವವರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ನಾಗನಗೌಡ ಸಮಿತಿಯವರು ರಫ್ ಆಗಿ ಮಾಡಿದ್ದರೆ ಅಧಿಕೃತವಾಗಿ ಇಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಮುಂತಾದವರನ್ನು ಕೆಲವು ಮೇಳೆ ಹೆಸರಿನಮೇಲೆ ಗುರ್ತಿಸಬಹುದು, ಮುಸ್ಲಿಮರ ಹೆಸರು ನೋಡಿ ಸಾಮಾನ್ಯವಾಗಿ ಗುರ್ತಿಸಬಹುದು. ಒಂದೊಂದು ಸಲ ಅದೂ ಕೂಡ ಹೆಸರಿನಿಂದ ಗೊತ್ತಾಗುವುದಿಲ್ಲ. ತಿಮ್ಮಪ್ಪ ಎಂದರೆ ಯಾವ ಜಾತಿ ಎಂದು ಕಂಡುಹಿಡಿಯುವುದು ಕಷ್ಟ.

ಶ್ರೀ ಎಂ. ಬಿ ರಾಮಸ್ವಾಮಿ.—ಉತ್ತರದಲ್ಲಿ ಅನುಸೂಚಿತ ಜಾತಿಯವರು ೧೭,೫೫೫ ನೌಕರರು ಮತ್ತು ಅನುಸೂಚಿತ ಆದಿಮ ಜಾತಿಯವರು ೨,೬೩೮ ಜನ ನೌಕರರು ಇದ್ದಾರೆಂದು ತಿಳಿಸಿದ್ದೀರಿ. ಅದರಲ್ಲಿ ಕ್ಲಾಸ ೧, ೨ ಮತ್ತು ೩ರಲ್ಲಿ ಎಷ್ಟು ನೌಕರರಿದ್ದಾರೆಂದು ತಿಳಿಸಲು ಸಾಧ್ಯವೇ?

ಶ್ರೀ ಡಿ. ದೇವರಾಜ ಅರಸ್.—ಕ್ಲಾಸ ಒಂದರಲ್ಲಿ ಷೆಡ್ಯೂಲ್ಡ ಕ್ಯಾಸ್ಟಿನ ನೌಕರರು ೧೧೧ ಜನ, ಷೆಡ್ಯೂಲ್ಡ ಟ್ರೈಬ್ಸಿನ ನೌಕರರು ೧೦ ಜನ ಇದ್ದಾರೆ, ಕ್ಲಾಸ ಎರಡರಲ್ಲಿ ಷೆಡ್ಯೂಲ್ಡ ಕ್ಯಾಸ್ಟಿನವರು ೨೬೮ ಜನ, ಷೆಡ್ಯೂಲ್ಡ ಟ್ರೈಬ್ಸಿನವರು ೩೦ ಜನ ಇದ್ದಾರೆ, ಕ್ಲಾಸ ಮೂರರಲ್ಲಿ ಷೆಡ್ಯೂಲ್ಡ ಕ್ಯಾಸ್ಟಿನವರು ೭೦೭೬ ಜನ, ಷೆಡ್ಯೂಲ್ಡ ಟ್ರೈಬ್ಸಿನವರು ೧೫೫೮ ಜನ ಇದ್ದಾರೆ, ಕ್ಲಾಸ ನಾಲ್ಕರಲ್ಲಿ ಷೆಡ್ಯೂಲ್ಡ ಕ್ಯಾಸ್ಟಿನವರು ೧೦,೦೬೦ ಜನ ಷೆಡ್ಯೂಲ್ಡ ಟ್ರೈಬ್ಸಿನವರು ೧೩೬೦ ಜನ ಇದ್ದಾರೆ, ಒಟ್ಟು ಕ್ಲಾಸ ಒಂದರಿಂದ ಹಿಡಿದು ಕ್ಲಾಸ ನಾಲ್ಕರ ವರೆಗೆ ಷೆಡ್ಯೂಲ್ಡ ಕ್ಯಾಸ್ಟಿನವರು ೧೭೫೫೫ ಜನ ಮತ್ತು ಷೆಡ್ಯೂಲ್ಡ ಟ್ರೈಬ್ಸಿನವರು ೨೬೫೮ ಜನ ಇದ್ದಾರೆ. ಒಟ್ಟು ಎಲ್ಲಾ ಜಾತಿಗಳವರೂ ಸೇರಿ ೨,೭೬,೨೭೦ ಜನ ನೌಕರರಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮುಸ್ಲಿಮರ ಹೆಸರನ್ನು ಹೆಸರಿನಮೇಲೆ ಸಾಮಾನ್ಯವಾಗಿ ಹೇಳಬಹುದು ಎಂದರು. ಈಗ ರಹೀಂ ಸಾಹೇಬರು ರಾಂ ಸಾಬರಾಗಿದ್ದಾರೆ. ನವಾಬ ಸಾಬರು ನಂದಿ ಬಸಪ್ಪ ಆಗಿದ್ದಾರೆ. ಹೀಗಿರುವಾಗ ಹೇಗೆ ಕಂಡುಹಿಡಿಯಲು ಸಾಧ್ಯ?

ಶ್ರೀ ಡಿ ದೇವರಾಜ ಅರಸ್.—ಮಾನ್ಯ ಸಿದ್ದಪ್ಪನವರು ಸಿದ್ದಿಕಿ ಆದರೆ ತಿಳಿಯುವುದು ಕಷ್ಟ.

ಶ್ರೀ ಕೆ. ಎನ್. ವೀರಪ್ಪಗೌಡ.—ಈಗ ಪಿ. ಎಸ್. ಸಿ. ಗೆ ಅಪ್ಲಿಕೇಷನ್ ಹಾಕುವಾಗ ಜಾತಿಯನ್ನು ನಮೂದಿಸಬೇಕೆಂಬ ನಿರ್ಬಂಧವಿದೆಯೆ? ಹಾಗಿಲ್ಲದಿದ್ದರೆ ನಮೂದಿಸುವಂತೆ ಏಕೆ ಕೇಳಬಾರದು?

ಶ್ರೀ ಡಿ. ದೇವರಾಜ ಅರಸ — ರಾಜ್ಯಾಂಗದ ಪ್ರಕಾರ ಆ ರೀತಿ ಕೇಳಲು ಅಧಿಕಾರ ಇಲ್ಲ. ಸಿದ್ದೇಗೌಡರು ಎಂದಿದ್ದರೆ ಅವರು ಲಿಂಗಾಯಿತರಿರಬಹುದು, ಕುರುಬರಿರಬಹುದು, ರೆಡ್ಡಿ ಇರಬಹುದು. ನಮ್ಮ ಅರಸುಗಳಲ್ಲಿ ಕೂಡ ಸಿದ್ದರಾಜ ಗೌಡ, ಚನ್ನರಾಜಗೌಡ ಎಂದು ಹೆಸರನ್ನಿಟ್ಟುಕೊಂಡಿರುವವರಿದ್ದಾರೆ. ಅದುದರಿಂದ ಹೆಸರಿನ ಮೇಲೆ ಜಾತಿ ಹೇಳುವುದು ಕಷ್ಟ.

ಶ್ರೀ ಎಚ್. ಟಿ. ಕೃಷ್ಣಪ್ಪ — ಜಾತಿಯ ಆಧಾರದ ಮೇಲೆ ನೌಕರಿಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬ ಕೂಗು ಹೆಚ್ಚಾಗಿದೆ. ಆದುದರಿಂದ ಜಾತಿಗಳ ಆಧಾರದ ಮೇಲೆ ಸೇಕಡಾವಾರು ನೌಕರಿ ಕೊಡುವ ನೀತಿಯಿದೆಯೇ?

ಶ್ರೀ ಡಿ. ದೇವರಾಜ ಅರಸ. — ಇಲ್ಲ ಸ್ವಾಮಿ.

ಶ್ರೀ ಕೆ. ಆರ್. ಎಸ್. ನಾಯ್ಡು — ನೌಕರರ ಸಂಖ್ಯೆ ಜಾಸ್ತಿ ಇರುವುದರಿಂದ ಸರಕಾರಿ ಮಷೀನರಿಯಿಂದ ಅಂಕಿ ಅಂಶ ಕೊಡುವುದು ಕಷ್ಟವಾಗುತ್ತದೆ. ಆದುದರಿಂದ ಸಾರ್ವಜನಿಕ ಕ್ಷೇತ್ರದಿಂದ ಅಂಕಿಅಂಶ ಸಂಗ್ರಹಿಸಲು ಪ್ರಯತ್ನ ಮಾಡುವಿರಾ?

ಶ್ರೀ ಡಿ. ದೇವರಾಜ ಅರಸ — ಹಾಗೆ ಅಧಿಕೃತವಾಗಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ — ಜಾತಿವಾರು ಅಂಕಿಅಂಶ ಸಂಗ್ರಹಿಸುವುದರಲ್ಲಿ ತಪ್ಪೇನು? ಸಮಾಜವಾದಿ ಸರಕಾರವಿದೆ. ಇಂಡಿಯಾ ದೇಶದಲ್ಲಿ ಸಮಾಜವಾದ ಜಾರಿಗೆ ಬರುವಾಗ ಜಾತಿ, ವರ್ಣ, ವರ್ಗ ಮುಂತಾದ ವಿಷಯಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಬೇಕಾದ ಕ್ರಮ ಕೈಕೊಳ್ಳಲು ತೊಂದರೆಯೇನು?

ಶ್ರೀ ಡಿ. ದೇವರಾಜ ಅರಸ. — ಕಾನೂನು ರೀತ್ಯ ಅದು ಸಾಧ್ಯವಿಲ್ಲ. ಅಧಿಕಾರಯುತವಾಗಿ ಕೇಳುವುದಕ್ಕೆ ಕಷ್ಟ; ಸಾಧ್ಯವಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ — ರಾಜ್ಯದಲ್ಲಿ ನೌಕರರ ಸಂಖ್ಯೆ ೨,೭೬,೬೭೦ ನೌಕರಿದ್ದಾರೆ. ಅದರ ಅನುಸೂಚಿತ ಜಾತಿಯ ನೌಕರರ ಸಂಖ್ಯೆ ಕೇವಲ ೧೫,೫೨೫ ಮಾತ್ರವಿದೆ. ರಾಜ್ಯಾಂಗದ ಪ್ರಕಾರ ಸೇಕಡ ೧೫ ಹುದ್ದೆಗಳನ್ನು ಕೊಡಬೇಕೆಂಬ ತತ್ವವನ್ನು ಸರಕಾರ ಒಪ್ಪಿರುವುದರಿಂದ ಪ್ರತಿಯೊಂದು ಇಲಾಖೆಯಲ್ಲೂ ಅದರಂತೆ ಕೊಡುವುದಕ್ಕೆ ಅವಕಾಶ ಕಲ್ಪಿಸುವಿರಾ? ಅದಕ್ಕೆ ವಿಶೇಷವಾಗಿ ರೆಕ್ರೂಟಮೆಂಟ ಮಾಡುವಿರಾ?

ಶ್ರೀ ಡಿ. ದೇವರಾಜ ಅರಸ್. — ನಾನು ಮೊದಲೇನು ಆ ಒಂದು ಫಿಗರನ್ನು ಹೇಳಿದ್ದೆ ಅಂದರೆ ಆ ೨ ಲಕ್ಷ ಜನರಿಗೆ ಇದು ಸಂಬಂಧಪಡುವುದಿಲ್ಲ. ತಾವು ತಮ್ಮ ಲೆಕ್ಕವನ್ನು ೧ ಲಕ್ಷ ೬೫ ಸಾವಿರದ ೧೬೬ಕ್ಕೆ ಮಾಡಿದರೆ ನಿಮ್ಮ ಪರ್ಸೆಂಟೇಜ್ ಸರಿ ಹೋಗುತ್ತದೆ. ನಾನು ಮೊದಲ ಕೊಟ್ಟ ಆ ಸಂಖ್ಯೆಯಲ್ಲಿ ಒಂದು ಲಕ್ಷ ಒಂದು ಸಾವಿರದ ನೂರನಾಲ್ಕನ್ನು ಕಳೆಯಬೇಕು. ಈ ಒಂದು ಸಾವಿರದ ಒಂದು ನೂರಾ

ಚಿಲ್ಲರೆ ಸಂಖ್ಯೆ ಏನಿದೆ ಇದು ವಿದ್ಯಾ ಇಲಾಖೆಗೆ ಸಂಬಂಧಪಟ್ಟಿದ್ದು. ಇದರಲ್ಲಿ ಈ ಹರಿಜನರು ಮತ್ತು ಗಿರಿಜನರು ಎಷ್ಟಿದ್ದಾರೆಂಬುದು ಗೊತ್ತಾಗಿಲ್ಲ.

ಇನ್ನು ಎರಡನೆಯ ವಿಚಾರಕ್ಕೆ ಬಂದರೆ ಈ ನೌಕರಿಗಳಲ್ಲಿ ಹರಿಜನರ ಸಂಖ್ಯೆ ೧೮ ಪರ್ಸೆಂಟು ಮುಟ್ಟುವವರೆಗೆ ಅವರ ಸ್ಥಾನಗಳಲ್ಲಿ ಇತರರನ್ನು ಭರ್ತಿಮಾಡಬಾರದೆಂದು ಹೇಳಿದ್ದಾರೆ. ಆದರೆ ಈ ಸರ್ಕಾರದವರು ಹಾಲಿ ಅನುಸರಿಸುತ್ತಿರುವ ನೀತಿ ಕೂಡ ಅವರು ಹೇಳಿದ್ದಕ್ಕೇ ಬರುತ್ತದೆ. ಯಾವುದಾದರೂ ಒಂದು ಸ್ಥಾನವನ್ನು ಭರ್ತಿಮಾಡತಕ್ಕ ಸಂದರ್ಭದಲ್ಲಿ ಅದಕ್ಕೆ ಹರಿಜನ ಗಿರಿಜನರು ಸಿಕ್ಕದಿದ್ದರೆ ಆ ವೇಳೆಯಲ್ಲಿ ಆ ಸ್ಥಾನವನ್ನು ಭರ್ತಿಮಾಡಿದರೂ ಮುಂದೆ ಹರಿಜನರಿಗೆ ಮೀಸಲಿಡತಕ್ಕ ಸ್ಥಾನಗಳೇನಿವೆ ಅವುಗಳ ಪರ್ಸೆಂಟೇಜನ್ನು ಹಿಂದೆ ಅವರಿಗೆ ಕೊಡದೆ ಕೈಬಿಟ್ಟ ಸ್ಥಾನಗಳನ್ನು ಸೇರಿಸಿ ಲೆಕ್ಕಮಾಡಿ ಅವರಿಗೆ ಮೀಸಲಿಡುತ್ತಿರುವುದರಿಂದ ಅದೂ ಆಲ್ಲಿಗೇ ಬಂತು.

ಶ್ರೀ ಕಾಗೋಡು ತಿಮ್ಮಪ್ಪ.— ಈ ದಿವಸ ಸರ್ಕಾರಿ ನೌಕರಿಗಳಲ್ಲಿ ಹರಿಜನ ಗಿರಿಜನರ ಹಾಗೂ ಹಿಂದುಳಿದವರ ಪ್ರಾತಿನಿಧ್ಯ ಬಹಳ ಕಡಮೆ ಇರುವುದರಿಂದ ಅದನ್ನು ಸರಿಪಡಿಸತಕ್ಕ ಬಗ್ಗೆ ಸರ್ಕಾರ ಏನೊಂದು ಆಯೋಗವನ್ನು ರಚಿಸಿದೆ ಅದಕ್ಕೆ ಈ ಕೊಮುಗಳಿಗೆ ಸಂಬಂಧಪಟ್ಟ ಅಂಕಿಅಂಶಗಳನ್ನು ಒದಗಿಸಿಕೊಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ.— ಸರ್ಕಾರಕ್ಕೆಷ್ಟು ಸಾಧ್ಯವೋ ಅಷ್ಟನ್ನು ಮಾಡೋಣ.

MADAM SPEAKER.— Questions are over.

Questions for Answers on the Day (but not taken up)

METAL BREAKING CENTRES IN BASAVAKALYAN AND HUMNABAD TALUKS

75. SRI BAPURAO ANANDARAO (Basavakalyan).— Will the Chief Minister be pleased to state:—

(a) the number of metal breaking centres opened during March, April, May 1973 in Basavakalyan and Humnabad taluk giving average labour strenght at each place per week;

(b) the number of place of work spot where shades and rest houses have been provided and the date of provi-